# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು–570006

ದಿನಾಂಕ: 18.09.2021ರಂದು ಪೂರ್ವಾಹ್ನ 11.00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಡಾ.ವಿದ್ಯಾಶಂಕರ್.ಎಸ್.ರವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ನಡೆದ ವ್ಯವಸ್ಥಾಪನಾ ಮಂಡಳಿಯ **೭೭ನೇ** ವಿಶೇಷ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಡಾ. ವಿದ್ಯಾಶಂಕರ್.ಎಸ್.**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು | **ಪ್ರೊ. ಆರ್. ರಾಜಣ್ಣ**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು,<br>ಕರಾಮುವಿ, ಮೈಸೂರು |
| **ಶ್ರೀ ಎಸ್. ನಾಗರಾಜ್,**<br>ವಿಧಾನ ಪರಿಷತ್ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಕರಾಮುವಿ, ಮೈಸೂರು. | **ಶ್ರೀ ಎನ್. ಅಪ್ಪಾಜಿಗೌಡ**<br>ವಿಧಾನ ಪರಿಷತ್ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.162/49, "ನೈದಿಲೆ", 6ನೇ ಅಡ್ಡ ರಸ್ತೆ,<br>ಬಾಪೂಜಿ ಬಡಾವಣೆ, ಚಂದ್ರ ಲೇಔಟ್,<br>ವಿಜಯನಗರ, ಬೆಂಗಳೂರು–560 040 |
| **ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ**<br>ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ<br>ಹಾಗೂ ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ, ಮಂಗಳ ಗಂಗೋತ್ರಿ,<br>ಮಂಗಳೂರು – 574 199 | **ಡಾ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮೈಸೂರು |
| **ಶ್ರೀ ಎಲ್. ನಾಗೇಂದ್ರ**<br>ವಿಧಾನ ಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 2373/ಸಿ, 1ನೇ ಅಡ್ಡ ರಸ್ತೆ,<br>5ನೇ ಮುಖ್ಯ ರಸ್ತೆ, ಜಯನಗರ,<br>ಮೈಸೂರು – 570 014 | **ಪ್ರೊ. ಯಶಸ್ವಿನಿ.ಎಸ್.**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 303, 2ನೇ ಮಹಡಿ<br>ಗೌರವ್ ದಿ ರೆಸಿಡೆನ್ಸಿ ಅಪಾರ್ಟ್‌ಮೆಂಟ್<br>1ನೇ ಮುಖ್ಯ ರಸ್ತೆ, ಲಕ್ಷ್ಮೀ ಪುರಂ,<br>ಮೈಸೂರು – 570 004 |
| **ಶ್ರೀ ಎನ್. ಕೃಷ್ಣೇಗೌಡ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 150, 2ನೇ ಅಡ್ಡ ರಸ್ತೆ, 'ಐ' ಬ್ಲಾಕ್<br>ಕುವೆಂಪುನಗರ, ಮೈಸೂರು – 570 023 | **ಡಾ. ಪ್ರದೀಪ್.ಪಿ.ಆರ್.,**<br>ನಂ. 1653, 1ನೇ ಮಹಡಿ, 5ನೇ ಅಡ್ಡ ರಸ್ತೆ,<br>6ನೇ ಸಿ ಮುಖ್ಯ ರಸ್ತೆ, ಆರ್.ಪಿ.ಸಿ. ಬಡಾವಣೆ,<br>ಬೆಂಗಳೂರು – 560 040 |
| **ಶ್ರೀಮತಿ ಲಾವಣ್ಯ.ಪಿ.**<br>ನಂ. 401, ಟಿ.ಎಫ್. ಮಾಲ್ಗುಡಿ ಅಪಾರ್ಟ್‌ಮೆಂಟ್<br>ನಾದಬ್ರಹ್ಮ ಸಂಗೀತ ಸಭಾ ಎದುರುಗಡೆ<br>ಲಕ್ಷ್ಮೀಪುರಂ, ಮೈಸೂರು – 570 004 | **ಡಾ. ಆರ್.ಹೆಚ್. ಅಕಮಂಚಿ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 55, 'ಕಾಮಧೇನು'<br>ಕೃಷ್ಣಾ ಬಡಾವಣೆ, ಲಕ್ಷ್ಮೀ ನಗರ, ಗೋಕುಲ ರಸ್ತೆ,<br>ಹುಬ್ಬಳ್ಳಿ – 580 030 |

ಕುಲಪತಿಗಳು



ಕುಲಸಚಿವರು

| ಅನುಪಸ್ಥಿತರು | |
|---|---|
| **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**<br>ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ), ಹಾಗೂ<br>ವ್ಯವಸ್ಥಾಪನ ಮಂಡಳಿಯ ಸದಸ್ಯರು<br>ಬೆಂಗಳೂರು – 560 001 | **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001 |
| **ಶ್ರೀ ಬಿ.ಸಿ. ನಾಗೇಶ್.,**<br>ವಿಧಾನ ಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುದಿ<br>ಮನೆ ನಂ. 93, 1ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆ<br>ಕೆ.ಆರ್. ಬಡಾವಣೆ, ತಿಪಟೂರು ತಾಲ್ಲೂಕು<br>ತುಮಕೂರು ಜಿಲ್ಲೆ – 572 201 | -- |

ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

ಮಾನ್ಯ ಕುಲಪತಿಗಳು ತಮ್ಮ ಪ್ರಸ್ತಾವಿಕ ನುಡಿಯಲ್ಲಿ ದಿನಾಂಕ: 28.07.2021 ರಿಂದ 23.08.2021 ರವರೆಗೆ ಪಿಯು–ಸಿ.ಇ.ಟಿ.ಗೆ ಒಟ್ಟು 65 ಅಭ್ಯರ್ಥಿಗಳು ಆನ್‌ಲೈನ್ ಕೋಚಿಂಗ್ ಪಡೆದಿರುವ ವಿಷಯವನ್ನು ಹಾಗೂ 150 ಅಭ್ಯರ್ಥಿಗಳು ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಹುದ್ದೆಗಳ ನೇಮಕಾತಿ ಪರೀಕ್ಷೆಗೆ ತರಬೇತಿ ಪಡೆಯುತ್ತಿರುವ ವಿಷಯವನ್ನು ಸಭೆಯಲ್ಲಿ ತಿಳಿಸಿದರು.

ಮುಂದುವರೆದು, 2021–22ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮುಖಾಂತರ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ (CMKKY) ಯಡಿಯಲ್ಲಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು, ನಮ್ಮ ವಿಶ್ವವಿದ್ಯಾನಿಲಯದಲ್ಲಿ ಜಾಬ್ ರೋಲ್‌ಗಳಿಗೆ ಅನುಗುಣವಾಗಿ ಕಾರ್ಯಾದೇಶವನ್ನು ನೀಡಲಾಗಿದೆ ಎಂಬುದನ್ನು ಸಭೆಯ ಗಮನಕ್ಕೆ ತಂದರು.

ನಂತರ, ಅಧ್ಯಕ್ಷರು ವಿಷಯಸೂಚಿ ಪ್ರಕಾರ 166ನೇ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಚರ್ಚಿಸಲು ಆರಂಭಿಸಿದರು.

<u>ವಿಷಯ ಸಂಖ್ಯೆ : ೧೬.01</u>

ಅ) ದಿನಾಂಕ: 03.07.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 165ನೇ ಸಾಮಾನ್ಯ ಸಭೆಯ ನಡವಳಿ ಹಾಗೂ ದಿನಾಂಕ: 17.08.2021ರಂದು ನಡೆದ 54ನೇ ವಿಶೇಷ ಸಭೆಯ ನಡವಳಿಯನ್ನು ಸ್ಥಿರೀಕರಿಸುವ ಬಗ್ಗೆ.

ಆ) ದಿನಾಂಕ: 03.07.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 165ನೇ ಸಾಮಾನ್ಯ ಸಭೆಯ ತೀರ್ಮಾನ ಹಾಗೂ ದಿನಾಂಕ: 17.08.2021ರಂದು ನಡೆದ 54ನೇ ವಿಶೇಷ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿಯನ್ನು ಅನುಮೋದಿಸುವ ಬಗ್ಗೆ.

**ಅ) ದಿನಾಂಕ: 03.07.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 165ನೇ ಸಾಮಾನ್ಯ ಸಭೆಯ ನಡವಳಿಯನ್ನು ಹಾಗೂ ದಿನಾಂಕ : 17.08.2021ರಂದು ನಡೆದ 54ನೇ ವಿಶೇಷ ಸಭೆಯ ನಡವಳಿಯನ್ನು ಸ್ಥಿರೀಕರಿಸಲಾಯಿತು.**

**ಆ) ದಿನಾಂಕ: 03.07.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 165ನೇ ಸಾಮಾನ್ಯ ಸಭೆಯ ತೀರ್ಮಾನಗಳು ಹಾಗೂ ದಿನಾಂಕ : 17.08.2021ರಂದು ನಡೆದ 54ನೇ ವಿಶೇಷ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಲಾಯಿತು.**

* * * * * * *

ಕುಲಪತಿಗಳು



ಕುಲಸಚಿವರು

ವಿಷಯ ಸಂಖ್ಯೆ : 55.02

ವಿಷಯ : ಶ್ರೀ ಶಶಿಕುಮಾರ್.ಎಸ್.ಎ, ಎಲೆಕ್ಟ್ರಿಷಿಯನ್, ಇಂಜಿನಿಯರಿಂಗ್ ವಿಭಾಗ, ಕರಾಮುವಿ ಇವರ ವೈದ್ಯಕೀಯ ವೆಚ್ಚದ ಮುರುಭರಿಕೆ ಕುರಿತು.

* * * * *

ಶ್ರೀ. ಶಶಿಕುಮಾರ್.ಎಸ್.ಎ, ಎಲೆಕ್ಟ್ರಿಷಿಯನ್, ಇಂಜಿನಿಯರಿಂಗ್ ವಿಭಾಗ, ಕರಾಮುವಿ ಇವರು ವಿಶ್ವವಿದ್ಯಾನಿಲಯದ ಖಾಯಂ ಉದ್ಯೋಗಿಯಾಗಿದ್ದು, ಇವರ ಕಿಡ್ನಿ ಡಯಾಲಿಸಿಸ್ ಸಂಬಂಧದಲ್ಲಿ ಮೈಸೂರಿನ ಕಾಮಾಕ್ಷಿ ಆಸ್ಪತ್ರೆಯಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆದು 2021-22ನೇ ಆರ್ಥಿಕ ಸಾಲಿನಲ್ಲಿ ರೂ 32,619/- ಗಳ ವೈದ್ಯಕೀಯ ವೆಚ್ಚದ ಹುಂಡಿಯನ್ನು ಮರುಭರಿಕೆಗಾಗಿ ಸಲ್ಲಿಸಿರುತ್ತಾರೆ.

ಈ ಹುಂಡಿಯನ್ನು ಕೆ.ಎಂ.ಎ ನಿಯಮಾವಳಿ 1963 ರ ನಿಯಮ 3ರ ಪ್ರಕಾರ ಪರಿಶೀಲಿಸಿದಾಗ ರೂ:30490/-ಗಳನ್ನು ಮಾತ್ರ ಪಾವತಿಸಲು ಅಂಗೀಕರಿಸಬಹುದಾಗಿರುತ್ತದೆ. ಸದರಿಯವರು ಈಗಾಗಲೇ 2021-22 ನೇ ಸಾಲಿನಲ್ಲಿ 92,168/- ರೂ ಗಳ ವೈದ್ಯಕೀಯ ವೆಚ್ಚವನ್ನು ಮರುಭರಿಕೆ ಮಾಡಲಾಗಿರುತ್ತದೆ. 2021-22ನೇ ಸಾಲಿನಲ್ಲಿ ಸದರಿಯವರ ವೈದ್ಯಕೀಯ ವೆಚ್ಚವು 1 ಲಕ್ಷ ಮೀರುವುದೆಂದು ವಿಶ್ವವಿದ್ಯಾನಿಲಯವು ರಚಿಸಿಕೊಂಡಿರುವ Satute relating to Adoption "The Karnataka Government Servants (Medical Attendance) Rules, 1963 to the Employees of KSOU" ಪರಿನಿಯಮದ ಕ್ಲಾಸ್ (3)ರ ಪ್ರಕಾರ ಒಬ್ಬ ನೌಕರರಿಗೆ ಒಂದು ವರ್ಷದಲ್ಲಿ ಮರುಭರಿಕೆಯ ವೆಚ್ಚವು ಗರಿಷ್ಟ ಮಿತಿಯು ಒಂದು ಲಕ್ಷ ಮೀರಬಾರದೆಂದಿರುತ್ತದೆ.

ಮುಂದುವರೆದು ಸದರಿ ನಿಯಮಗಳನ್ನು ಕಾರ್ಯಗತಗೊಳಿಸುವಲ್ಲಿ ಸಂದೇಹ, ಕ್ಲಿಷ್ಟವಾದಲ್ಲಿ ಪರಿನಿಯಮದ ಕ್ಲಾಸ್ (5)ರ ಪ್ರಕಾರ ವ್ಯವಸ್ಥಾಪನಾ ಮಂಡಳಿಯ ಮುಂದೆ ಮಂಡಿಸಿ ಬಗೆಹರಿಸಿಕೊಳ್ಳಬಹುದಾಗಿದೆ ಎಂದಿರುತ್ತದೆ (ಪರಿನಿಯಮದ ಪ್ರತಿ ಲಗತ್ತಿಸಿದೆ).

ಸದರಿ ನೌಕರರು 2021-22ನೇ ಸಾಲಿನಲ್ಲಿ ವೈದ್ಯಕೀಯ ವೆಚ್ಚವು ಒಂದು ಲಕ್ಷ ರೂಗಳ ಮಿತಿಯನ್ನು ಮೀರುತ್ತಿರುವುದರಿಂದ (ರೂ: 1,22,658,-1,00,000=30,490/-) ಗರಿಷ್ಟ ಮಿತಿಗೂ ಹೆಚ್ಚುವರಿಯಾಗಿ ವ್ಯಯಿಸಿರುವ ವೈದ್ಯಕೀಯ ವೆಚ್ಚವನ್ನು ನಿಯಮಗಳಡಿಯಲ್ಲಿ ಮರುಭರಿಕೆ ಮಾಡುವ ಸಂಬಂಧದಲ್ಲಿ ವ್ಯವಸ್ಥಾಪನಾ ಮಂಡಳಿಯ ಸಭೆಯ ಮುಂದೆ ವಿಷಯವನ್ನು ಚರ್ಚೆ ಹಾಗೂ ನಿರ್ಣಯಕ್ಕೆ ಮಂಡಿಸಿದೆ.

ಮುಂದುವರೆದು, ಸದರಿ ನೌಕರರು ಪ್ರತಿ ತಿಂಗಳು ಕಿಡ್ನಿ ಡಯಾಲಿಸಿಸ್ ಮಾಡಿಸುತ್ತಿರುವುದರಿಂದ ಇನ್ನೂ ಮುಂದೆಯೂ ಬರಬಹುದಾದ ವೈದ್ಯಕೀಯ ಮರು ಭರಿಕೆ ಹುಂಡಿಯನ್ನು ಭರಿಸುವ ಬಗ್ಗೆ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

ತೀರ್ಮಾನ :

**ವಿಷಯವನ್ನು ಚರ್ಚಿಸಿದ ಸಭೆಯು, ಗರಿಷ್ಟ ಮಿತಿಗೂ ಹೆಚ್ಚುವರಿಯಾಗಿ ವ್ಯಯಿಸಿರುವ ವೈದ್ಯಕೀಯ ವೆಚ್ಚವನ್ನು ಹಾಗೂ ಮುಂದೆ ಬರಬಹುದಾದ ಹೆಚ್ಚುವರಿ ಅನುಮೋದಿಸ-ಬಹುದಾದ ವೆಚ್ಚವನ್ನು ನಿಯಮಗಳಡಿಯಲ್ಲಿ ಮರುಭರಿಕೆ ಮಾಡುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.**

* * * * * * *

ಕುಲಪತಿಗಳು



ಕುಲಸಚಿವರು

**ವಿಷಯ ಸಂಖ್ಯೆ: ೮೮.೦೩**

ವಿಷಯ : 165ನೇ ಮಾನ್ಯ ವ್ಯವಸ್ಥಾಪನಾ ಮಂಡಳಿಗೆ ಮಂಡಿಸಲಾಗಿದ್ದ ವಿಷಯ ಸಂಖ್ಯೆ: 165.06ರಲ್ಲಿ ಕಣ್ಣತಪ್ಪಿನಿಂದ ನಮೂದಿಸಲಾಗಿದ್ದ ತಾಂತ್ರಿಕ ಸಮಿತಿ ಸಭೆಯ ದಿನಾಂಕದ ಬಗೆಗೆ.

* * * * *

ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ವತಿಯಿಂದ ನಡೆಸಲಾಗುವ ಪರೀಕ್ಷಾ ಕಾರ್ಯಗಳು ಮತ್ತು ಮೌಲ್ಯಮಾಪನ ಕಾರ್ಯಗಳಿಗೆ ಪ್ರಸ್ತುತ ಚಾಲ್ತಿಯಲ್ಲಿರುವ ಮೂಲಭೂತ ಸೌಲಭ್ಯಗಳನ್ನು ಮೇಲ್ದರ್ಜೆಗೆ ನವೀಕರಿಸಿ, ಪರೀಕ್ಷಾ ವಿಭಾಗದ ಸೇವೆ ಮತ್ತು ಕಾರ್ಯಗಳ ಸುಲಲಿತ ನಿರ್ವಹಣೆ ಸಲುವಾಗಿ ಪರೀಕ್ಷಾ ಕಾರ್ಯಗಳನ್ನು ಸಂಪೂರ್ಣವಾಗಿ ಗಣಕೀಕರಣಗೊಳಿಸುವ ಸಂಬಂಧದ ವಿಷಯವನ್ನು 165ನೇ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಸಂಖ್ಯೆ: 165.06ರಲ್ಲಿ ಮಂಡಿಸಲಾಗಿ ಸಭೆಯು ನಿಯಮಾನುಸಾರ ಖರೀದಿ ಪ್ರಕ್ರಿಯೆಗೆ ಅನುಮೋದನೆ ನೀಡಿರುತ್ತದೆ (ಅನುಬಂಧ-1).

165.06ರಲ್ಲಿ ಮಂಡಿಸಲಾಗಿದ್ದ ವಿಷಯದಲ್ಲಿ ತಾಂತ್ರಿಕ ಸಮಿತಿ ಸಭೆಯ ದಿನಾಂಕವನ್ನು ಕಣ್ಣತಪ್ಪಿನಿಂದಾಗಿ ದಿನಾಂಕ: 24.02.2021ರ ಬದಲಿಗೆ 16.02.2021 ಎಂಬುದಾಗಿ ನಮೂದಿಸಲಾಗಿರುವ ಅಂಶವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಕಣ್ಣತಪ್ಪಿನಿಂದಾಗಿ ಆಗಿರುವ ದಿನಾಂಕದ ವ್ಯತ್ಯಾಸವನ್ನು ಅನುಮೋದಿಸುವಂತೆ ಕೋರಿದೆ.

**ತೀರ್ಮಾನ :**

ವಿಷಯವನ್ನು ಅವಗಾಹಿಸಿದ ಸಭೆಯು, ತಾಂತ್ರಿಕ ಸಮಿತಿ ಸಭೆಯ ದಿನಾಂಕಕ್ಕೆ ಸಂಬಂಧಿಸಿದಂತೆ ಕಣ್ತಪ್ಪಿನಿಂದಾಗಿದ್ದ ದಿನಾಂಕದ ವ್ಯತ್ಯಾಸವನ್ನು ಸರಿಪಡಿಸಿಕೊಳ್ಳಲು ಸಭೆಯು ಒಪ್ಪಿತು.

* * * * * * *

**ವಿಷಯ ಸಂಖ್ಯೆ: ೮೮.04**

ವಿಷಯ : ವಿ.ವಿ.ನಿಲಯದ ವಿಜ್ಞಾನ ಭವನ ಕಟ್ಟಡದಲ್ಲಿನ ಪ್ರಯೋಗಾಲಯಗಳ ಉನ್ನತೀಕರಣಕ್ಕೆ ಅಗತ್ಯ ಕಾಮಗಾರಿ ಕೆಲಸ, ಪೀಠೋಪಕರಣಗಳನ್ನು ಖರೀದಿಸುವುದು ಹಾಗೂ ಲಿಫ್ಟ್ ಅನ್ನು ಅಳವಡಿಸುವುದರ ಬಗ್ಗೆ

* * * * *

1. ಕರಾಮುವಿ ನಿಲಯದ ಆವರಣದಲ್ಲಿರುವ ವಿಜ್ಞಾನ ಭವನ ಕಟ್ಟಡದ ವಿವಿಧ ಪ್ರಯೋಗಾಲಯಗಳಾದ Bio Technology, Bio Chemistry, Food and Nutrition, Micro-biology, Chemistry ಇನ್ನು ಇದ್ಯಾದಿ ಪ್ರಯೋಗಾಲಯಗಳನ್ನು ಉನ್ನತೀಕರಿಸುವುದರ ಬಗ್ಗೆ ಆಯಾ ವಿಭಾಗದ ಮುಖ್ಯಸ್ಥರು ಪ್ರಯೋಗಾಲಯಕ್ಕೆ ಅನುಗುಣವಾಗಿ ಒಳಾಂಗಣ ಬದಲಾವಣೆ ಕೆಲಸಗಳನ್ನು ನಿರ್ವಹಿಸಿಕೊಡುವಂತೆ ಕೋರಿರುತ್ತಾರೆ. ಈ ಸಂಬಂಧ ಪ್ರಯೋಗಾಲಯ ಉನ್ನತೀಕರಣಕ್ಕೆ ಸಂಬಂಧಿಸಿದಂತೆ ಅಂದಾಜು ರೂ. 40.00 ಲಕ್ಷಗಳು ವೆಚ್ಚವಾಗಬಹುದೆಂದು ಅಂದಾಜಿಸಿದೆ. ಆದುದರಿಂದ ಸದರಿ ಕೆಲಸವನ್ನು (4G) ವಿನಾಯಿತಿಯಡಿಯಲ್ಲಿ ಮಾನ್ಯತೆ ಹೊಂದಿರುವ ಯಾವುದಾದರು ಸರ್ಕಾರಿ ಸಂಸ್ಥೆ ವತಿಯಿಂದ ಕೆಲಸವನ್ನು ನಿರ್ವಹಿಸುವುದರ ಬಗ್ಗೆ ವಿಷಯವನ್ನು ಸಭೆಯ ಚರ್ಚೆ ಹಾಗೂ ನಿರ್ಣಯಕ್ಕೆ ಮಂಡಿಸಿದೆ.

ಕುಲಪತಿಗಳು ಕುಲಸಚಿವರು

2. ಕರಾಮುವಿ ನಿಲಯದ ವಿಜ್ಞಾನ ಭವನ ಕಟ್ಟಡ ಪ್ರಯೋಗಾಲಯಗಳಿಗೆ (Laboratory) ಅಗತ್ಯವಾಗಿ ಕೆಲವು ಪೀಠೋಪಕರಣಗಳನ್ನು (Laboratory Stool/Chairs, High Back Chairs, Visitor's Chairs, Faculty Table, Writing Board, Bookcase Almirah, Map Storage Unit, Drawer pedestal with three drawers, Computer table, etc.) ಒದಗಿಸಿಕೊಡುವಂತೆ ವಿಭಾಗದ ಮುಖ್ಯಸ್ಥರುಗಳು ಕೋರಿರುತ್ತಾರೆ. ಈ ಸಂಬಂಧ ಅಗತ್ಯ ಪೀಠೋಪಕರಣಗಳನ್ನು ಒದಗಿಸುವುದರ ಸಂಬಂಧ ಅಂದಾಜನ್ನು ಸ್ಥಳೀಯ ಮಾರುಕಟ್ಟೆಯ ಅನುಸಾರ ರೂ. 40.00 ಲಕ್ಷಗಳು ವೆಚ್ಚವಾಗಬಹುದೆಂದು ಅಂದಾಜಿಸಿದೆ. ಆದುದರಿಂದ ಸದರಿ ಪೀಠೋಪಕರಣಗಳನ್ನು (4G) ವಿನಾಯಿತಿಯಡಿಯಲ್ಲಿ ಮಾನ್ಯತೆ ಹೊಂದಿರುವ ಯಾವುದಾದರು ಸರ್ಕಾರಿ ಸಂಸ್ಥೆ ವತಿಯಿಂದ ಸದರಿ ಸಾಮಾಗ್ರಿ/ಪೀಠೋಪಕರಣಗಳನ್ನು ಖರೀದಿಸುವುದರ ಬಗ್ಗೆ ವಿಷಯವನ್ನು ಸಭೆಯ ಚರ್ಚೆ ಹಾಗೂ ನಿರ್ಣಯಕ್ಕೆ ಮಂಡಿಸಿದೆ.

3. ಕರಾಮುವಿಯ ಆವರಣದಲ್ಲಿರುವ ವಿಜ್ಞಾನ ಭವನದ ಕಟ್ಟಡದಲ್ಲಿ ಪ್ರಸ್ತುತ ನೆಲ ಅಂತಸ್ತು ಸೇರಿದಂತೆ ಎರಡು ಅಂತಸ್ತಿನ ಕಟ್ಟಡವಾಗಿದ್ದು (GF+2 UF) ಸದರಿ ಕಟ್ಟಡದಲ್ಲಿ ಎಲಿವೇಟರ್/ಲಿಫ್ಟ್‌ನ ವ್ಯವಸ್ಥೆ ಇರುವುದಿಲ್ಲ. ಆದುದರಿಂದ ಈ ಸಂಬಂಧ ವಿವಿನಿಲಯಕ್ಕೆ ಮಾನ್ಯತೆಯನ್ನು ನೀಡುವ/ನವೀಕರಿಸುವುದರ ಸಮಯದಲ್ಲಿ ಆಗಮಿಸುವ UGC/PEER/ AICTE Committee ಯವರು ಕೆಲವು ಮಾನದಂಡಗಳನ್ನು ಒಳಗೊಂಡಂತೆ ವಿವಿನಿಲಯದಲ್ಲಿ ಅತ್ಯಾವಶ್ಯಕವಾಗಿ ಒಳಗೊಂಡಿರಬೇಕಾದ ಮೂಲಸೌಕರ್ಯದ ಪಟ್ಟಿಯ ಪ್ರಕಾರ ವಿಜ್ಞಾನ ಭವನದ ಕಟ್ಟಡಕ್ಕೆ ಎಲಿವೇಟರ್/ಲಿಫ್ಟ್ ಅನ್ನು ಅಳವಡಿಸುವುದರ ಬಗ್ಗೆ ಪರಿವೀಕ್ಷಣೆಯ ಸಮಯದಲ್ಲಿ ಕೇಳಿರುತ್ತಾರೆ. ಆದುದರಿಂದ ಸದರಿ ಕಟ್ಟಡಕ್ಕೆ ಅನುಕೂಲವಾಗಿರುವ ರೀತಿಯಲ್ಲಿ ಒಂದು ಎಲಿವೇಟರ್/ಲಿಫ್ಟ್ ಅನ್ನು ಅಳವಡಿಸುವುದರ ಸಂಬಂಧ ಅಂದಾಜನ್ನು ರೂ. 35.00 ಲಕ್ಷಗಳಿಗೆ ಅಂದಾಜಿಸಿದೆ. ಆದುದರಿಂದ ಸದರಿ ಕಟ್ಟಡಕ್ಕೆ ಒಂದು ಎಲಿವೇಟರ್/ಲಿಫ್ಟ್ ಅನ್ನು ಅಳವಡಿಸಲು (4G) ವಿನಾಯಿತಿಯಡಿಯಲ್ಲಿ ಮಾನ್ಯತೆ ಹೊಂದಿರುವ ಯಾವುದಾದರು ಸರ್ಕಾರಿ ಸಂಸ್ಥೆ ವತಿಯಿಂದ ಕೆಲಸವನ್ನು ನಿರ್ವಹಿಸುವುದರ ಬಗ್ಗೆ ವಿಷಯವನ್ನು ಸಭೆಯ ಚರ್ಚೆ ಹಾಗೂ ನಿರ್ಣಯಕ್ಕೆ ಮಂಡಿಸಿದೆ.

ತೀರ್ಮಾನ :

**ಕೂಲಂಕಷವಾಗಿ ವಿಷಯವನ್ನು ಚರ್ಚಿಸಿದ ಸಭೆಯು, 4(ಜಿ) ವಿನಾಯಿತಿ ಇರುವ ಸರ್ಕಾರಿ ಸಂಸ್ಥೆಗಳಿಂದ ಅಗತ್ಯ ಕೆಲಸಗಳನ್ನು ನಿರ್ವಹಿಸಲು, ಸಾಮಗ್ರಿ / ಪೀಠೋಪಕರಣಗಳನ್ನು ಖರೀದಿಸಲು ಹಾಗೂ ವಿಜ್ಞಾನ ಭವನ ಕಟ್ಟಡಕ್ಕೆ ಎಲಿವೇಟರ್/ ಲಿಫ್ಟ್ ಅಳವಡಿಸಿಕೊಳ್ಳಲು ಅನುಮೋದಿಸಿತು.**

* * * * * * *

**ವಿಷಯ ಸಂಖ್ಯೆ: ೫೫.೦೫**

ವಿಷಯ : **ವಿ.ವಿ. ನಿಲಯಕ್ಕೆ ರಾಷ್ಟ್ರೀಯ ಮೌಲ್ಯಂಕನ ಮತ್ತು ಮಾನ್ಯತೆ ಮಂಡಳಿ/ಸಮಿತಿ NAAC Committee ಗೆ ಸಂಬಂಧಿಸಿದಂತೆ ಅಗತ್ಯವಿರುವ ಕೆಲಸಗಳನ್ನು ಕೈಗೊಳ್ಳುವುದರ ಬಗ್ಗೆ.**

* * * * *

ಕರಾಮುವಿ ನಿಲಯಕ್ಕೆ ರಾಷ್ಟ್ರೀಯ ಮೌಲ್ಯಂಕನ ಮತ್ತು ಮಾನ್ಯತೆ ಮಂಡಳಿ/ಸಮಿತಿ NAAC Committee ವಿವಿನಿಲಯಕ್ಕೆ ಭೇಟಿ ನೀಡುವ ಹಿನ್ನಲೆಯಲ್ಲಿ, ಈ ಸಂಬಂಧ ವಿವಿನಿಲಯದ ನ್ಯಾಕ್ ಸಮಿತಿಯವರು ಕೆಲವು ಅಗತ್ಯ ಮಾನದಂಡದ ಪಟ್ಟಿಯನ್ನು ನೀಡಿರುತ್ತಾರೆ, ಅದರಂತೆ

ಕುಲಪತಿಗಳು ಕುಲಸಚಿವರು

ವಿವಿನಿಲಯವು ಕೆಲವು ಮೂಲಭೂತ ಸೌಕರ್ಯಗಳನ್ನು ಅಳವಡಿಸಿಕೊಳ್ಳಬೇಕಾಗಿದ್ದು, ಅದರ ಅನುಸಾರ ಈ ಕೆಳಕಂಡ ಕೆಲಸಗಳನ್ನು ನಿರ್ವಹಿಸಬೇಕಾಗಿರುತ್ತದೆ.

1. ವಿವಿನಿಲಯಕ್ಕೆ Rain Water Harvesting (ಮಳೆ ನೀರು ಕೊಯ್ಲು) ಅಳವಡಿಸಿಕೊಳ್ಳುವುದರ ಬಗ್ಗೆ. **ಅಂದಾಜು ವೆಚ್ಚ ರೂ. 15.00 ಲಕ್ಷಗಳು.**
2. ಕ್ರೀಡಾ ಚಟುವಟಿಕೆ ಸಂಬಂಧಿಸಿದಂತೆ, ಆಟದ ಮೈದಾನಗಳಾದ Badminton Court, Volley Ball Court, Basket Ball Court, Foot Ball Court, Cricket Field ಇತ್ಯಾದಿ ಆಟದ ಮೈದಾನವನ್ನು ಸಿದ್ಧಪಡಿಸುವುದರ ಬಗ್ಗೆ. **ಅಂದಾಜು ವೆಚ್ಚ ರೂ. 20.00 ಲಕ್ಷಗಳು.**
3. ವಿವಿನಿಲಯದ ಆವರಣದಲ್ಲಿ Sewage Treatment Plant (STP) (ಒಳಚರಂಡಿ ಸಂಸ್ಕರಣಾ ಘಟಕ) ಅನ್ನು ಅಳವಡಿಸಿಕೊಳ್ಳುವುದರ ಬಗ್ಗೆ. **ಅಂದಾಜು ವೆಚ್ಚ ರೂ. 30.00 ಲಕ್ಷಗಳು.**
4. ವಿವಿನಿಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರಿಗೆ ದೈಹಿಕ ಹಾಗೂ ಮಾನಸಿಕ ಒಳತಿಗಾಗಿ Gym ಸ್ಥಾಪಿಸುವುದರ ಬಗ್ಗೆ. **ಅಂದಾಜು ವೆಚ್ಚ ರೂ. 5.00 ಲಕ್ಷಗಳು.**
5. ವಿವಿನಿಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರಿಗೆ ದೈಹಿಕ ಹಾಗೂ ಮಾನಸಿಕ ಒಳತಿಗಾಗಿ ಕ್ರೀಡೆಗೆ ಸಂಬಂಧಿಸಿದಂತೆ ಕ್ರೀಡಾ ಉಪಕರಣಗಳನ್ನು ಖರೀದಿಸಿ ಅಳವಡಿಸುವುದರ ಬಗ್ಗೆ. **ಅಂದಾಜು ವೆಚ್ಚ ರೂ. 4.00 ಲಕ್ಷಗಳು.**

ಆದುದರಿಂದ ಈ ಎಲ್ಲಾ ಕೆಲಸವನ್ನು ನಿರ್ವಹಿಸುವುದರ ಬಗ್ಗೆ ವಿಷಯವನ್ನು ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

**ತೀರ್ಮಾನ :**

**ವಿಷಯವನ್ನು ಕೂಲಂಕಷವಾಗಿ ಸಭೆಯಲ್ಲಿ ಚರ್ಚಿಸಲಾಯಿತು. ವಿಶ್ವವಿದ್ಯಾನಿಲಯಕ್ಕೆ NAAC Committee ಭೇಟಿ ನೀಡುವ ಸಂಬಂಧ, ಅವಶ್ಯಕವಾಗಿರುವ ಮಾನದಂಡವನ್ನು ಪೂರೈಸಲು ಅಗತ್ಯವಿರುವ ಕೆಲಸಗಳನ್ನು 4(ಜಿ) ವಿನಾಯಿತಿ ಇರುವ ಸರ್ಕಾರಿ ಸಂಸ್ಥೆಗಳಿಂದ ನಿರ್ವಹಿಸಲು ಅನುಮೋದಿಸಿತು.**

* * * * * * *

**ವಿಷಯ ಸಂಖ್ಯೆ: 55.06**

**ವಿಷಯ : ಬೋಧಕೇತರ ನೇಮಕಾತಿ ಮಂಡಳಿ ಸಭೆಯ ನಡವಳಿಯನ್ನು ಅನುಮೋದಿಸುವ ಕುರಿತು.**

* * * * *

ಕರಾಮುವಿಯಲ್ಲಿ ಸೃಜನೆಯಾಗಿ ಖಾಲಿಯಿರುವ 07 (ಏಳು) ಉಪಕುಲಸಚಿವ ಹುದ್ದೆಗಳಿಗೆ ಬೋಧಕೇತರ ವರ್ಗದ 'ವೃಂದ ಮತ್ತು ನೇಮಕಾತಿ ಪರಿನಿಯಮ' (ಪರಿನಿಯಮ ಸಂಖ್ಯೆ: 36) ಪ್ರಕಾರ, ಈಗಾಗಲೇ ಉಪಕುಲಸಚಿವ ಹುದ್ದೆಯಲ್ಲಿ ಸ್ವತಂತ್ರ ಪ್ರಭಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಹಾಗೂ ಸಹಾಯಕ ಕುಲಸಚಿವರಾಗಿ ಕಾರ್ಯನಿರ್ವಹಿಸಿದ್ದು, ಪರಿನಿಯಮಗಳ ಪ್ರಕಾರ ಅರ್ಹತೆ ಹೊಂದಿರುವವರಿಗೆ ಮುಂದಿನ ಹಂತದ ಉಪಕುಲಸಚಿವ ಹುದ್ದೆಗೆ ಸ್ಥಾನಪನ್ನ/ಪದೋನ್ನತಿ ನೀಡಲು ಅಭ್ಯರ್ಥಿಗಳ ಶೈಕ್ಷಣಿಕ ವಿದ್ಯಾರ್ಹತೆ, ಸೇವಾ ವಿವರ ಹಾಗೂ ಮೀಸಲಾತಿ ನಿಯಮಗಳ ಪಾಲನೆ ಬಗ್ಗೆ ಕರಾಮುವಿ ಕಾಯ್ದೆಯ ಮೊದಲನೇ ಪರಿನಿಯಮಗಳ ಪರಿನಿಯಮ (14)ರಡಿ ಸರ್ಕಾರದಿಂದ ರಚಿಸಲ್ಪಟ್ಟಿರುವ ಬೋಧಕೇತರ ಸಿಬ್ಬಂದಿ ನೇಮಕಾತಿ ಮಂಡಳಿಯು ದಿನಾಂಕ:13.09.2021ರಂದು ಸಭೆ ಸೇರಿ ಪರಿಶೀಲಿಸಿ, ಮಾನ್ಯ ಕುಲಸಚಿವರಿಗೆ ನಡವಳಿಯನ್ನು ಸಲ್ಲಿಸಿರುತ್ತದೆ.

ಕುಲಪತಿಗಳು ಕುಲಸಚಿವರು

ಈ ಹಿನ್ನೆಲೆಯಲ್ಲಿ, ಬೋಧಕೇತರ ಸಿಬ್ಬಂದಿ ನೇಮಕಾತಿ ಮಂಡಳಿ ಸಭೆಯ ತೀರ್ಮಾನದಂತೆ ವ್ಯವಸ್ಥಾಪನಾ ಮಂಡಳಿ ಅನುಮೋದನೆಯನ್ನು ಕಾಯ್ದಿರಿಸಿ ಖಾಲಿಯಿರುವ ಏಳು ಉಪಕುಲಸಚಿವ ಹುದ್ದೆಗಳಿಗೆ ಸ್ಥಾನಪನ್ನ/ಪದೋನ್ನತಿ ಆದೇಶಗಳನ್ನು ದಿನಾಂಕ:17.09.2021ರಂದು ಹೊರಡಿಸಲಾಗಿರುವುದನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಬೋಧಕೇತರ ನೇಮಕಾತಿ ಮಂಡಳಿ ಸಭೆಯ ತೀರ್ಮಾನಕ್ಕೆ ಅನುಮೋದನೆ ಹಾಗೂ ಸದರಿ ಪ್ರಕ್ರಿಯೆಗೆ ಅನುಸಮರ್ಥನೆ ಕೋರಿ ವಿಷಯವನ್ನು ಸಭೆಗೆ ಮಂಡಿಸಿದೆ.

<u>ತೀರ್ಮಾನ</u> :

ವಿಷಯವನ್ನು ಚರ್ಚಿಸಿದ ಸಭೆಯು, ಸದರಿ ವಿಷಯದ ಬಗ್ಗೆ ವಿ.ವಿ.ನಿಲಯವು ಕೈಗೊಂಡಿರುವ ಕ್ರಮವನ್ನು ಒಪ್ಪಿ, ಅನುಸಮರ್ಥನೆ ನೀಡಿತು.

* * * * * * *

<u>ವಿಷಯ ಸಂಖ್ಯೆ : ೫೫.07</u>

**ವಿಷಯ : 19ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿಯನ್ನು ಅನುಮೋದಿಸುವ ಕುರಿತು.**

* * * * * * *

ದಿನಾಂಕ: 14.09.2021ರಂದು ನಡೆದ 19ನೇ ಶೈಕ್ಷಣಿಕ ಮಂಡಳಿ ಸಭೆಯ ನಡವಳಿಯನ್ನು ಮುಂಬರುವ ೫೫ನೇ ವ್ಯವಸ್ಥಾಪನಾ ಮಂಡಳಿ ವಿಶೇಷ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

* * * * * *

<u>ತೀರ್ಮಾನ</u> :

**19ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ವಿಷಯಗಳ ಬಗ್ಗೆ ಚರ್ಚಿಸಿದ ಸಭೆಯು, ಸಭೆಯ ನಡವಳಿಯನ್ನು ಅನುಮೋದಿಸಿತು.**

* * * * * * *

<u>ವಿಷಯ ಸಂಖ್ಯೆ: ೫೫.08</u>

**ವಿಷಯ : 16೫ನೇ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಲಾಗಿದ್ದ ವಿಷಯ ಸಂಖ್ಯೆ: 16೫.06 ಅನ್ನು ತಾಂತ್ರಿಕ ಸಮಿತಿಯ ಪ್ರಸ್ತಾವನೆ (Proposal)ಯನ್ನು ಮರು ಮಂಡಿಸುವ ಬಗ್ಗೆ.**

* * * * *

ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ಪರೀಕ್ಷಾ ಕಾರ್ಯಗಳು ಮತ್ತು ಮೌಲ್ಯಮಾಪನ ಕಾರ್ಯವನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸುವ ಸಂಬಂಧ ದಿನಾಂಕ: 16.02.2021 ರ ಅನುಮೋದನೆಯಂತೆ ರಚಿಸಲಾಗಿದ್ದ ತಾಂತ್ರಿಕ ಸಮಿತಿಯು ದಿನಾಂಕ: 24.02.2021 ರಂದು ಸಭೆ ಸೇರಿ ಮೌಲ್ಯಮಾಪನ ಕಾರ್ಯವನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸುವ ಸಂಬಂಧ ಪರೀಕ್ಷಾ ಕಾರ್ಯಗಳಿಗೆ ಅವಶ್ಯವಿರುವ ತಂತ್ರಾಂಶ, ಗಣಕಯಂತ್ರ, ಸ್ಕ್ಯಾನರ್, ಪ್ರಿಂಟರ್ ಹಾಗೂ ಇತರೆ ಉಪಕರಣಗಳ ಖರೀದಿ ಸಂಬಂಧ ಪಟ್ಟಿಯನ್ನು ಸಿದ್ಧಪಡಿಸಿ ಈ ಬಗ್ಗೆ ತಗಲಬಹುದಾದ ಅಂದಾಜು ಮೊತ್ತ ರೂ.2,44,01,200/- (ರೂ. ಎರಡು ಕೋಟಿ ನಲವತ್ತನಾಲ್ಕು ಲಕ್ಷದ ಒಂದು ಸಾವಿರದ ಇನ್ನೂರು ಮಾತ್ರ)ಗಳ (Bill of Materials) ಅನ್ನು ನಡಾವಳಿಯೊಂದಿಗೆ ಸಲ್ಲಿಸಿರುತ್ತಾರೆ. ಅದರಂತೆ ಸದರಿ ವಿಷಯವನ್ನು ಮಾನ್ಯ ಕುಲಪತಿಗಳ ಅನುಮೋದನೆಯಂತೆ 165ನೇ ಮಾನ್ಯ ವ್ಯವಸ್ಥಾಪನಾ

ಕುಲಪತಿಗಳು | ಕುಲಸಚಿವರು

ಮಂಡಳಿ ಸಭೆಗೆ ವಿಷಯ ಸಂಖ್ಯೆ: 165.06ರಲ್ಲಿ ಚರ್ಚೆ ಹಾಗೂ ಅನುಮೋದನೆಗಾಗಿ ವಿಷಯ ಮಂಡಿಸಲಾಗಿರುತ್ತದೆ.

ಸದರಿ ಸಭೆಯಲ್ಲಿ ಸದರಿ ಉಪಕರಣ ಹಾಗೂ ತಂತ್ರಾಂಶಗಳನ್ನು ನಿಯಮಾನುಸಾರ ಖರೀದಿಸುವ ಪ್ರಕ್ರಿಯೆಗೆ ಅನುಮೋದನೆ ನೀಡಿರುತ್ತದೆ (ಅನುಬಂಧ-1).

ಮುಂದುವರೆದು, ತಾಂತ್ರಿಕ ಸಮಿತಿಯು ದಿನಾಂಕ: 04.09.2021ರಂದು ಸಭೆ ಸೇರಿ ಮತ್ತೊಮ್ಮೆ ಈ ಹಿಂದೆ ನೀಡಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಸದರಿ ಪ್ರಸ್ತಾವನೆಯಲ್ಲಿ ಸಾಫ್ಟವೇರ್‌ಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿಲ್ಲದಿರುವ ಹಿನ್ನೆಲೆಯಲ್ಲಿ ಪರೀಕ್ಷಾ ವಿಭಾಗದ ಅವಶ್ಯಕತೆಗನುಗುಣವಾಗಿ ನೂತನ ಮಾದರಿ ಸಾಫ್ಟವೇರ್ ಹಾಗೂ ಸಂಬಂಧಿತ ಉಪಕರಣಗಳನ್ನು ಸೇರ್ಪಡೆಗೊಳಿಸಿ ಪರೀಕ್ಷಾ ಕಾರ್ಯವನ್ನು ಸಂಪೂರ್ಣವಾಗಿ ಡಿಜಟಲೀಕರಣಗೊಳಿಸುವುದು ಸೂಕ್ತವೆಂದು ತೀರ್ಮಾನಿಸಿ ಅದರಂತೆ ರೂ.2,89,86,500/- (ರೂ.ಎರಡು ಕೋಟಿ ಎಂಭತ್ತೊಂಭತ್ತು ಲಕ್ಷದ ಎಂಭತ್ತಾರು ಸಾವಿರದ ಐದುನೂರು ಮಾತ್ರ) ಗಳ ಅಂದಾಜು ಮೊತ್ತದ ವಿವರವಾದ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ (ಅನುಬಂಧ-2).

ಈ ಹಿನ್ನೆಲೆಯಲ್ಲಿ ತಾಂತ್ರಿಕ ಸಮಿತಿಯು ಸಲ್ಲಿಸಿರುವ ದಿನಾಂಕ: 04.09.2021ರ ವಿವರವಾದ ಪ್ರಸ್ತಾವನೆಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ವಿಷಯ ಮರು ಮಂಡಿಸಿದೆ.

ತೀರ್ಮಾನ :

**ವಿಷಯವನ್ನು ಅವಗಾಹಿಸಿದ ಸಭೆಯು, ದಿನಾಂಕ : 04.09.2021ರಂದು ನಡೆಸಿದ ತಾಂತ್ರಿಕ ಸಮಿತಿ ಸಭೆಯ ಮರು-ಪ್ರಸ್ತಾವನೆಯಂತೆ ಶಿಫಾರಸ್ಸು ಮಾಡಿರುವ ಹೆಚ್ಚುವರಿ ಹಣಕಾಸಿನ ಖರ್ಚು ಸೇರಿದಂತೆ ಹೊಸದಾಗಿ ಕೋರಿರುವ ರೂ.2,89,86,500/- ಗಳ ಪ್ರಸ್ತಾವನೆಯನ್ನು ಅನುಮೋದಿಸಿತು.**

* * * * * * *

**ವಿಷಯ ಸಂಖ್ಯೆ: 55.09**

**ವಿಷಯ :** **ಕರಾಮುವಿಯಲ್ಲಿ ಡಿಜಿಟಲ್ ಡಿಸ್‌ಪ್ಲೇ ಬೋರ್ಡ್‌ನ್ನು ಸರಬರಾಜು ಮಾಡಿ ಅಳವಡಿಸುವ ಬಗ್ಗೆ.**

* * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರವೇಶಾತಿ, ಪರೀಕ್ಷಾ ಮತ್ತು ಇನ್ನಿತರೆ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ವೀಕ್ಷಿಸಲು ಅನುಕೂಲವಾಗುವಂತೆ ವಿವಿಯಲ್ಲಿ ಎರಡು ಡಿಜಿಟಲ್ ಡಿಸ್‌ಪ್ಲೇ ಬೋರ್ಡ್‌ಗಳನ್ನು ಮೆ. ಕಿಯೋನಿಕ್ಸ್, ಬೆಂಗಳೂರು, ರವರಿಂದ ಅಳವಡಿಸುವುದು ಸೂಕ್ತವೆಂದು ತಿಳಿಸಿ ದಿನಾಂಕ: 04.09.2021 ರಂದು ಮಾನ್ಯ ಕುಲಪತಿಗಳು ಟಿಪ್ಪಣಿ ನೀಡಿದ್ದು, ಅದರಂತೆ, ವಿವಿ ನಿಲಯದಲ್ಲಿ ಎರಡು ಡಿಜಿಟಲ್ ಡಿಸ್‌ಪ್ಲೇ ಬೋರ್ಡ್‌ಗಳನ್ನು ಅಳವಡಿಸುವ ಬಗ್ಗೆ Specification ಅನ್ನು ಸಿದ್ಧಪಡಿಸಿ ಸದರಿ ಕಾರ್ಯಕ್ಕೆ ತಗಲುವ ದರದ ಪ್ರಸ್ತಾವನೆಯನ್ನು ಸಲ್ಲಿಸುವಂತೆ ದಿನಾಂಕ: 06.09.2021 ರಂದು ಮೆ. ಕಿಯೋನಿಕ್ಸ್, ಬೆಂಗಳೂರು ರವರಿಗೆ ಪತ್ರ ಬರೆಯಲಾಗಿರುತ್ತದೆ.

ಮೆ. ಕಿಯೋನಿಕ್ಸ್, ಬೆಂಗಳೂರು, ರವರು ದಿನಾಂಕ: 17.09.2021 ರಂದು ವಿವಿ ನಿಲಯಕ್ಕೆ ಎರಡು ಡಿಜಿಟಲ್ ಡಿಸ್‌ಪ್ಲೇ ಬೋರ್ಡ್‌ಗಳನ್ನು ಸರಬರಾಜು ಮಾಡಿ ಅಳವಡಿಸುವ ಬಗ್ಗೆ ಒಟ್ಟು

ಕುಲಪತಿಗಳು



ಕುಲಸಚಿವರು

ರೂ. 39,01,552/- (ರೂ. ಮೂವತ್ತೊಂಭತ್ತು ಲಕ್ಷದ ಒಂದು ಸಾವಿರದ ಐದುನೂರ ಐವತ್ತೆರಡು ಮಾತ್ರ) ಗಳ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ (ಅನುಬಂಧ-1). ಸದರಿ ಸಂಸ್ಥೆಯವರು ಸಲ್ಲಿಸಿರುವ ಪ್ರಸ್ತಾವನೆಯಂತೆ ವಿ.ವಿ.ನಿಲಯಕ್ಕೆ ಎರಡು ಡಿಜಿಟಲ್ ಡಿಸ್‌ಪ್ಲೇ ಬೋರ್ಡ್‌ಗಳನ್ನು ಅಳವಡಿಸುವ ಬಗ್ಗೆ ಮಾನ್ಯ ವ್ಯವಸ್ಥಾಪನಾ ಮಂಡಳ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

<u>ತೀರ್ಮಾನ</u> :

ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಪ್ರವೇಶಾತಿ, ಪರೀಕ್ಷಾ ಮತ್ತು ಇನ್ನಿತರೆ ವಿಷಯ/ಮಾಹಿತಿಗಳನ್ನು ವಿದ್ಯಾರ್ಥಿಗಳು/ಸಾರ್ವಜನಿಕರು ವೀಕ್ಷಿಸಲು ಅನುಕೂಲ ಆಗುವುದನ್ನು ಪರಿಗಣಿಸಿ, ವಿ.ವಿ.ನಿಲಯದಲ್ಲಿ ಎರಡು ಡಿಜಿಟಲ್ ಡಿಸ್‌ಪ್ಲೇ ಬೋರ್ಡ್‌ಗಳನ್ನು ಮೆ. ಕಿಯೋನಿಕ್ಸ್, ಬೆಂಗಳೂರು, ಇವರಿಂದ ಅಳವಡಿಸಿಕೊಳ್ಳಲು ಅನುಮೋದಿಸಿತು.

* * * * * * *

<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಅಧ್ಯಕ್ಷರು ಪ್ರಸ್ತಾಪಿಸಿ, ಚರ್ಚೆಗೊಂಡ ಇನ್ನಿತರೆ ವಿಷಯಗಳು</u> :

(1) ಸಭೆಯು ಪೂರ್ಣಗೊಂಡ ನಂತರ, ಮಾನ್ಯ ಕುಲಪತಿಗಳು ಮಾತನಾಡಿ, ಈ ಹಿಂದೆ ದಿನಾಂಕ: 10.01.2018ರಂದು ನಡೆದ 149ನೇ ವ್ಯವಸ್ಥಾಪನಾ ಮಂಡಳ ಸಭೆಯ ತೀರ್ಮಾನದನ್ವಯ, ಬೋಧಕ ಹುದ್ದೆ ನೇಮಕಾತಿಗೆ ಸಂಬಂಧಿಸಿದಂತೆ ಸಮಾಜ ಕಲ್ಯಾಣ ಇಲಾಖೆಯಿಂದ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಬ್ಯಾಕ್‌ಲಾಗ್ ಹುದ್ದೆಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆಪೂರ್ವ ನಿಗದಿತ ರೋಸ್ಟರ್ ಪದ್ಧತಿಯನ್ನು ಅಳವಡಿಸಿ, ಅನುಮೋದನೆ ಪಡೆದು ಹಾಗೂ 371 (ಜೆ) ಹುದ್ದೆಗಳಿಗೆ ಸಂಬಂಧಿಸಿದಂತೆ ಮೀಸಲಾತಿಯನ್ನು ಗುರುತಿಸಿ, ನೇಮಕಾತಿ ಪ್ರಕ್ರಿಯೆ ಮಾಡಲು ತೀರ್ಮಾನವಾಗಿರುತ್ತದೆ. ಅದರಂತೆ, ಮೀಸಲಾತಿ ಸಂಬಂಧ ಅನುಮೋದನೆ ಪಡೆಯಲಾಗಿರುತ್ತದೆ. ಮುಂದುವರೆದು, ಹೈದರಾಬಾದ್-ಕರ್ನಾಟಕ ಮೀಸಲಾತಿಗೆ ಸಂಬಂಧಿಸಿದಂತೆ, ಸರ್ಕಾರದ ಪತ್ರ ಸಂಖ್ಯೆ: ಇಡಿ 18 ಯುಓವಿ 2020, ದಿನಾಂಕ: 23.08.2021ರ ನಿರ್ದೇಶನದನ್ವಯ 371 (ಜೆ) ಹುದ್ದೆಗಳನ್ನು ಗುರುತಿಸಿದ್ದು, ವಿ.ವಿ.ನಿಲಯವು ದಿನಾಂಕ: 24.08.2021ರಂದು ಅಧಿಸೂಚನೆ ಹೊರಡಿಸಲಾಗಿದೆ. ವಿ.ವಿ.ನಿಲಯದಲ್ಲಿ ಸೃಜನೆಯಾಗಿರುವ ಹುದ್ದೆಗಳಲ್ಲಿ ಅಗತ್ಯವಿರುವ ಬೋಧಕ ವರ್ಗದ ಹುದ್ದೆಗಳನ್ನು ವಿವಿಧ ಅಧ್ಯಯನ ವಿಭಾಗಗಳಿಗೆ re-deploy (ಮರು-ನಿಯೋಜನೆ/ಮರು-ಹೊಂದಾಣಿಕೆ) ಮಾಡುವ ಸಂಬಂಧ ಕ್ರಮ ವಹಿಸಲು ಕುಲಪತಿಗಳಿಗೆ ಅಧಿಕಾರ ನೀಡಿತು.

(2) ಮುಂದುವರೆದು, ಮಾನ್ಯ ಕುಲಪತಿಗಳು ಮಾತನಾಡಿ, ಸಿ.ಎ.ಎಸ್. ಅಡಿಯಲ್ಲಿ ಪದೋನ್ನತಿ ನೀಡಿದ್ದ ಸಂಬಂಧ, ವಿ.ವಿ.ನಿಲಯದ ಐದು ಅಧ್ಯಾಪಕರುಗಳು ತಮಗಾಗಿರುವ ಪದೋನ್ನತಿ ವ್ಯತ್ಯಾಸವನ್ನು ನಿವಾರಿಸಿ, ತಮಗೆ ಸಲ್ಲಬೇಕಿರುವ ಸವಲತ್ತುಗಳನ್ನು ನೀಡುವಂತೆ ಮನವಿ ಸಲ್ಲಿಸಿದ್ದ ವಿಷಯವನ್ನು ಸಭೆಯ ಗಮನಕ್ಕೆ ತಂದು, ಈ ಸಂಬಂಧ, ವಿ.ವಿ.ನಿಲಯವು ರಚಿಸಿದ್ದ 'ಕುಂದು-ಕೊರತೆ ನಿವಾರಣಾ ಸಮಿತಿ'ಯು ದಿನಾಂಕ : 17.09.2021ರಂದು ಪುನಃ ಸಭೆ ಸೇರಿ ಐವರು ಅಧ್ಯಾಪಕರುಗಳು ಸಲ್ಲಿಸಿದ್ದ ಮನವಿಯನ್ನು ಯುಜಿಸಿ (UGC) ಹಾಗೂ ಎ.ಐ.ಸಿ.ಟಿ.ಇ. (AICTE) ಮಾನದಂಡದನ್ವಯ ಪರಿಶೀಲಿಸಿ, ವರದಿಯನ್ನು ಸಿದ್ಧಪಡಿಸಿ ವಿ.ವಿ.ನಿಲಯಕ್ಕೆ ಸಲ್ಲಿಸಿತು.

ಸದರಿ ಸಮಿತಿಯು ಸಲ್ಲಿಸಿರುವ ವರದಿಯನ್ನು ಮಾನ್ಯ ಕುಲಪತಿಗಳು ವ್ಯವಸ್ಥಾಪನಾ ಮಂಡಳಿಯ 55ನೇ ವಿಶೇಷ ಸಭೆಯ ಗಮನಕ್ಕೆ ತಂದರು.

ಸಮಿತಿಯ ವರದಿಯನ್ನು ಆಲಿಸಿದ ವ್ಯವಸ್ಥಾಪನಾ ಮಂಡಳ ಸಭೆಯು, 'ಕುಂದು-ಕೊರತೆ ನಿವಾರಣಾ ಸಮಿತಿ' ಯು ನೀಡಿರುವ ವರದಿಯನ್ನು ಅನುಷ್ಠಾನಕ್ಕೆ ತರಲು ಅನುಮೋದಿಸಿತು.

ಕುಲಪತಿಗಳು



ಕುಲಸಚಿವರು.

(3) ಶ್ರೀಮತಿ ಪುಟ್ಟಮಾದಮ್ಮ, ಉಪಕುಲಸಚಿವೆ (ಸ್ವ/ಪ್ರ) (ನಿವೃತ್ತಿ), ಕರಾಮುವಿ, ಇವರು ಉಪಕುಲಸಚಿವೆ ಹುದ್ದೆಯನ್ನು Officiating ಮಾಡಿ, ಪಿಂಚಣಿ ಮತ್ತು ಇತರೆ ಸೌಲಭ್ಯಗಳನ್ನು ಪರಿಷ್ಕರಿಸಿಕೊಡುವಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಗೆ ಮನವಿಯನ್ನು ಸಲ್ಲಿಸಿದ್ದರು. ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು. ನಂತರ, ಸಭೆಯು ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಸ್ಪಷ್ಟೀಕರಣ ಕೋರಿ ಪತ್ರ ಬರೆದು ತದನಂತರ ಸರ್ಕಾರದ ನಿರ್ದೇಶನದಂತೆ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಿತು.

(4) ವಿ.ವಿ.ನಿಲಯದ ಆವರಣ, ಆವರಣದಲ್ಲಿರುವ ಕಟ್ಟಡಗಳು ಹಾಗೂ ಎಲ್ಲಾ ಪ್ರಾದೇಶಿಕ ಕೇಂದ್ರ ಕಛೇರಿಗಳ ಕಟ್ಟಡಗಳಿಗೆ ನಾಮಫಲಕ ಅಳವಡಿಸುವ ಸಂಬಂಧ ಕುಲಪತಿಗಳು ಪ್ರಸ್ತಾಪಿಸಿದ ಅಂದಾಜು ವೆಚ್ಚ ರೂ.20.00 ಲಕ್ಷಗಳಿಗೆ ಸಭೆಯು ಅನುಮೋದನೆ ನೀಡಿತು.

(5) ಮಾನ್ಯ ಕುಲಪತಿಗಳು ಮಾತನಾಡಿ, ಹಿಂದಿನ ಸಾಲುಗಳಲ್ಲಿ ವಿದ್ಯಾರ್ಥಿಗಳ ಅರ್ಜಿ ಸಲ್ಲಿಸುವಿಕೆ, ಪ್ರವೇಶಾತಿ ಕೆಲಸಗಳನ್ನು ಸಹಾಯಕ ಕಲಿಕಾ ಕೇಂದ್ರ ಹಾಗೂ ಪ್ರಾದೇಶಿಕ ಕೇಂದ್ರಗಳ ಮುಖಾಂತರ ನಿರ್ವಹಿಸಿ, ಪರೀಕ್ಷಾ ವಿಭಾಗದಿಂದ ಪರೀಕ್ಷೆ ನಡೆಸುವ ಸಂಬಂಧ ಎಲ್ಲಾ ಕೆಲಸಗಳನ್ನು ಮೆ. ಕಿಯೋನಿಕ್ಸ್ ಸಂಸ್ಥೆ ವತಿಯಿಂದ ನಿರ್ವಹಿಸಲಾಗುತ್ತಿತ್ತು. ಆದರೆ, 2021-22ನೇ ಸಾಲಿನಿಂದ ಮೇಲ್ಕಾಣಿಸಿದ ಎಲ್ಲಾ ಕೆಲಸಗಳನ್ನು ಸರ್ಕಾರವೇ ನಿರ್ವಹಿಸುತ್ತಿರುವ ಯು.ಯು.ಸಿ.ಎಂ.ಎಸ್. ಸಾಫ್ಟ್‌ವೇರ್ ಮುಖಾಂತರ ನಿರ್ವಹಣೆ ಮಾಡಲು ಕ್ರಮ ವಹಿಸಬೇಕೆಂದು ತಿಳಿಸಿರುತ್ತಾರೆ. ಆದರೆ, ಹಿಂದಿನ ಸಾಲುಗಳಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಸಂಬಂಧ ಎಲ್ಲಾ ಕೆಲಸ-ಕಾರ್ಯಗಳನ್ನು ಮೆ. ಕಿಯೋನಿಕ್ಸ್ ಸಂಸ್ಥೆಯೇ ನಿರ್ವಹಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಹಿಂದಿನ ಸಾಲುಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಎಲ್ಲಾ ಕೆಲಸಗಳನ್ನು ನಿರ್ವಹಿಸುವ ಸಂಬಂಧ (ಪ್ರವೇಶಾತಿ ಮತ್ತು ಪರೀಕ್ಷಾ ಸಂಬಂಧ) ಮೆ. ಕಿಯೋನಿಕ್ಸ್ ಸಂಸ್ಥೆಯವರನ್ನೇ ಕೋರಬೇಕಾಗುತ್ತದೆಂದು ಸಭೆಗೆ ತಿಳಿಸಿದರು. ಇದಕ್ಕೆ ಸಭೆಯು ಸಂಬಂಧಿಸಿದ ಕೆಲಸ-ಕಾರ್ಯಗಳ ನಿರ್ವಹಣೆ ಸಂಬಂಧ ಸೂಕ್ತ ತೀರ್ಮಾನ ಕೈಗೊಳ್ಳಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

(6) ಮಾನ್ಯ ಸದಸ್ಯರಾದ ಶ್ರೀ ಎಲ್. ನಾಗೇಂದ್ರ, ಶಾಸಕರು, ಕರಾಮುವಿ ನೌಕರರಾದ ಶ್ರೀ ಗುರುಮಂಜ ಹಾಗೂ ಶ್ರೀ ಎಸ್.ಪಿ.ಪುಷ್ಪರಾಜ್ ಇವರುಗಳ ಮನವಿ ಬಗ್ಗೆ ಪ್ರಸ್ತಾಪಿಸಿದರು. ಮಾನ್ಯ ಕುಲಪತಿಗಳು ನೌಕರರ ಮನವಿಯನ್ನು ನಿಯಮಾನುಸಾರ ಇತ್ಯರ್ಥಗೊಳಿಸಲು ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

(7) ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಕೆಲವು ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಿಗೆ ಅವಶ್ಯವಿರುವ ಅತಿಥಿ ಉಪನ್ಯಾಸಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವ (on Contract Basis) ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಿಸಿದರು. ಸದರಿ ವಿಷಯವು ದಿನಾಂಕ : 25.06.2021ರಂದು ನಡೆದ 17ನೇ ವಿಶೇಷ ಶೈಕ್ಷಣಿಕ ಸಭೆಯಲ್ಲಿ (ವಿ.ಸಂ. : 17.18) ಹಾಗೂ ದಿನಾಂಕ : 03.07.2021ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 165ನೇ ಸಾಮಾನ್ಯ ಸಭೆಯಲ್ಲಿ (ವಿ.ಸಂ. 165.12) ಈಗಾಗಲೇ ಚರ್ಚೆಗೊಂಡಿರುವುದಾಗಿ ಸಭೆಗೆ ತಿಳಿಸಿದರು.

ನಂತರ ಮಾತನಾಡಿದ ಕುಲಪತಿಗಳು, UGC ODL & OL Regulations 2020 Annexure IV, Section I. A.(i) (ii) ರ ಪ್ರಕಾರ, ಅಧ್ಯಯನ ವಿಭಾಗಗಳಲ್ಲಿ ನಿರ್ದಿಷ್ಟ ಸಂಖ್ಯೆಯ ಅಧ್ಯಾಪಕರುಗಳು ಇರಬೇಕೆಂಬ ನಿಯಮವಿರುತ್ತದೆ. ಆದರೆ, ಕೆಲವು ವಿಭಾಗಗಳಲ್ಲಿ ಅಧ್ಯಾಪಕರ ಸಂಖ್ಯೆ ಯು.ಜಿ.ಸಿ. ನಿಯಮಾವಳಿಗಳಿಗೆ ಹೋಲಿಸಿದಲ್ಲಿ ಕಡಿಮೆ ಇದ್ದು, ಕಾರ್ಯಭಾರವು ಹೆಚ್ಚಿಗೆ ಇರುವುದರಿಂದ ಅತಿಥಿ ಉಪನ್ಯಾಸಕರನ್ನು ತಾತ್ಕಾಲಿಕವಾಗಿ Contract Basis ಮೇಲೆ ನೇಮಕ ಮಾಡಿಕೊಳ್ಳುವುದಕ್ಕೆ ಸಭೆಯಲ್ಲಿ ಈಗಾಗಲೇ

ಕುಲಪತಿಗಳು



ಕುಲಸಚಿವರು

ಅನುಮೋದನೆ ನೀಡಿದೆ ಎಂಬುದಾಗಿ ತಿಳಿಸಿದರು. ಈ ಹಿನ್ನೆಲೆಯಲ್ಲಿ, ವಿ.ವಿ.ನಿಲಯವು ಅಳವಡಿಸಿಕೊಂಡಿರುವ ಪರಿನಿಯಮ XXI ರ 4(2) ರ ಪ್ರಕಾರ ಅತಿಥಿ ಉಪನ್ಯಾಸಕರನ್ನು '2' ವರ್ಷದ ಅವಧಿಗೆ ಮೀರದಂತೆ ತಾತ್ಕಾಲಿಕವಾಗಿ Contract Basis ಮೇಲೆ ನೇಮಕ ಮಾಡಿಕೊಳ್ಳಬಹುದಾಗಿರುತ್ತದೆಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು.

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಮೊದಲು '2' ವರ್ಷದ ಅವಧಿಗೆ ಅವಶ್ಯಕತೆಗೆ ಅನುಗುಣವಾಗಿ ತಾತ್ಕಾಲಿಕವಾಗಿ Contract Basis ಮೇಲೆ ನೇಮಕ ಮಾಡಿಕೊಂಡು, ಈಗಾಗಲೇ ಸಂದರ್ಶನದ ಮೂಲಕ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡುವಂತೆ ತೀರ್ಮಾನಿಸಿತು. ಈ ಸಂಬಂಧ, ಸೇವಾ ಅವಧಿಯನ್ನು '2' ವರ್ಷದ ಬದಲಿಗೆ '5' ವರ್ಷದ ಅವಧಿಗೆ ವಿಸ್ತರಿಸಿಕೊಳ್ಳುವಂತೆ ಪರಿನಿಯಮಕ್ಕೆ ತಿದ್ದುಪಡಿ ತಂದು ಸರ್ಕಾರದ ಮುಖಾಂತರ ಕುಲಾಧಿಪತಿಗಳ ಅಂಕಿತ ಪಡೆಯಲು ಕ್ರಮ ವಹಿಸುವಂತೆ ತೀರ್ಮಾನಿಸಲಾಯಿತು.

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 55ನೇ ವಿಶೇಷ ಸಭೆಗೆ ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಮಾನ್ಯ ಕುಲಪತಿಗಳು ಎಲ್ಲ ಸದಸ್ಯರುಗಳಿಗೂ ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

* * * * * * *

ಕುಲಪತಿಗಳು

ಕುಲಸಚಿವರು